ಇ) ಎರಡು ವರ್ಷಗಳಿಂದ ನಡೆಸಿದ ದಾಳಿಯ ಪ್ರಕರಣಗಳೆಷ್ಟು? (ಪಟ್ಟಿ ಕೊಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಇಲ್ಲಾ

ಆ) ಪ್ರಶ್ನೆ (ಅ)ಗೆ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ

ಇ)

ಕ್ರಮ ಸಂಖ್ಯೆ	ವರ್ಷ	ದಾಳಿ ನಡೆಸಿದ ಪ್ರಕರಣಗಳ ಸಂಖ್ಯೆ
1)	1999	20
2)	2000	32
3)	31-1-2001 ರಿಂದ 30-6-2001 ರವರೆಗೆ	13
	ಒಟ್ಟು	65

ತುರುವೇಕೆರೆ ತಾಲ್ಲೂಕು ದಬ್ಬೇಗಟ್ಟ ಗ್ರಾಮದಲ್ಲಿ ಪೋಲೀಸ್ ಠಾಣೆ ತೆರೆಯುವುದು.

3067(3785)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ)(ತುರುವೇಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಬ್ಬೇಗಟ್ಟ ಗ್ರಾಮದಲ್ಲಿ ಪೊಲೀಸ್ ಠಾಣೆ ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇತ್ತೀಚಿನ ದಿವಸಗಳಲ್ಲಿ ದೂರು ಗಲಾಟೆಗಳು ಜಾಸ್ತಿ ಆಗುತ್ತಿರುವುದರಿಂದ ತಕ್ಷಣ ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಎಷ್ಟು ದಿನಗಳಲ್ಲಿ ಈ ಗ್ರಾಮದಲ್ಲಿ ಠಾಣೆ ತೆರೆಯಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಇಲ್ಲ.

ಆ) ದಬ್ಬೇಗಟ್ಟಿ ಹೋಬಳಿಯ ಗ್ರಾಮಗಳಲ್ಲಿ ನಡೆದ ಪ್ರಕರಣಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕಿನಲ್ಲಿ ಶಾಲೆ ಮತ್ತು ಬಸ್‌ಸ್ಟ್ಯಾಂಡ್ ಇರುವ ಕಡೆ ಶರಾಬು ಅಂಗಡಿ ತೆರವು ಮಾಡುವುದು.

3068(3786)

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)(ತುರವೇಕರೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು, ಮಾಯಸಂದ್ರ ಹೋಬಳಿ, ಭೈತರ ಹೊಸಳ್ಳಿ ಗೇಟ್‌ನಲ್ಲಿ ಶಾಲಾ ಮುಂಭಾಗದಲ್ಲಿ (ಬಸ್ ಸ್ಟಾಪ್ ಬಳಿ) ಶರಾಬು ಮಾರಲು ಅಂಗಡಿ ತೆಗೆಸಲಾಗಿದೆಯೇ?

ಆ) ಪಿ.ಡಬ್ಲ್ಯೂ.ಡಿ ರಸ್ತೆಯಲ್ಲಿ ಅಂಗಡಿ ಹಾಕಿ ಶರಾಬು ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶಾಲೆ ಮತ್ತು ಬಸ್‌ಸ್ಟಾಪ್ ಇರುವ ಕಡೆ ಶರಾಬು ಮಾರಲು ಅವಕಾಶವಿದೆಯೇ?

ಈ) ಇಲ್ಲದಿದ್ದಲ್ಲಿ ತಕ್ಷಣ ಈ ಅಂಗಡಿ ತೆಗೆಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಇಲ್ಲ.

ಇ) ಅಬಕಾರಿ ನಿಯಮಗಳ ಪ್ರಕಾರ ನೂರು ಮೀಟರ್ ಅಂತರದೊಳಗೆ ಶಿಕ್ಷಣ